ಉದುರಿರಬಹುದು ಎನ್ನುತ್ತಾ ಮುಂದೆ ಹೆಜ್ಜೆ ಹಾಕಿದ ನಾಗ. ನಾಗ ಒಂದು ಬಾಳೆ ಮರದ ನಾರನ್ನು ಕಿತ್ತು ಕಾಲ ಪಾದಕ್ಕೆ ಸಡಿಲವಾಗಿ ಸುತ್ತು ಕಟ್ಟಿ ತಳೆ ತಯಾರಿಸಿದ. ರೋಹಿತನಿಗೂ ಒಂದು ತಯಾರಿಸಿಕೊಟ್ಟ. ಅದನ್ನು ಪಾದಕ್ಕೆ ಸಿಕ್ಕಿಸಿಕೊಂಡು ಅಡಿಕೆ ಮರ ಹತ್ತಿ ಇಳಿಯುವ ಆಟ ಬಹಳ ಹೊತ್ತಿನವರೆಗೆ ಆಡಿದರು.

ಈಗ ರೋಹಿತ ಬೊಂಡ ಕುಡಿಯೋಣ ಬಾರೋ ಎಂದು ನಾಗನನ್ನು ಕರೆದ. ರೋಹಿತನ ತೋಟದಲ್ಲಿ ಪುಟ್ಟ ಪುಟ್ಟ ತೆಂಗಿನ ಮರದಲ್ಲಿ ಕಾಯಿ ಬಿಟ್ಟಿದೆ. ಅವೆಲ್ಲ ಕೇರಳದ ಕಡೆಯಿಂದ ಸಸಿ ತಂದು ನೆಟ್ಟು ಮಾಡಿದ ಗಿಡಗಳು ಎಂದು ಅಪ್ಪ ಹೇಳುತ್ತಿದ್ದ. ರೋಹಿತ ನಾಗನ ಹತ್ತಿರ ತೆಂಗಿನ ಮರದಿಂದ ಬೊಂಡ ತೆಗೆಯಲು ಹೇಳಿದ. ನಾಗನಿಗೆ ಅದೆಲ್ಲಾ ಸುಲಭ. ಅದರಲ್ಲೂ ಬಹಳ ತಗ್ಗಾದ ಮರಗಳು. ಎರಡು ಬೊಂಡ ತೆಗೆದ. ಇಬ್ಬರೂ ಕತ್ತಿಯಿಂದ ಅದರ ತುದಿ ಕತ್ತರಿಸಿ ನೀರು ಕುಡಿದರು. ನೀರು ತುಂಬಾ ಸಿಹಿ ಇದೆ ಎಂದ ನಾಗ...

'ಹಾಂ, ನಾವು ನೀರಿಗೆ ಇಳಿದು ಈಜದೆ ಎಷ್ಟು ದಿನವಾಯಿತು' ಎಂದ ರೋಹಿತ. ನಾಗನ ಕೈ ಹಿಡಿದು ಎಳೆದ. ಇಬ್ಬರೂ ತೋಟದ ಬದಿಯಲ್ಲಿನ ಹಳ್ಳದ ಗುಂಡಿಗೆ ನಡೆದರು. ಹಳ್ಳದ ಎರಡೂ ಬದಿಯಲ್ಲಿ ಕಲ್ಲು ಬಂಡೆಯ ಸಾಲು ಇದೆ. ಮಧ್ಯದಲ್ಲಿ ನೀರು ನಿಧಾನವಾಗಿ ಹರಿಯುತ್ತದೆ. ಅಲ್ಲೇ ಈ ಮಕ್ಕಳು ಈಜುತ್ತಾರೆ.

ನಾಗ ತನ್ನ ಅಂಗಿಯನ್ನು ತೆಗೆದಿಟ್ಟು ಹಳ್ಳದ ಗುಂಡಿಗೆ ಜಿಗಿದ. ಅವನಿಗೆ ಈಜಲು ಚೆನ್ನಾಗಿ ಬರುತ್ತದೆ. ರೋಹಿತ ಕೂಡಾ ಜಿಗಿದ. ಅವನೂ ಈಜುತ್ತಾನೆ. ಈಗ ಮೇಲೆ ಬಂದ ನಾಗ ಮತ್ತೆ ಜಿಗಿದು ನೀರಿನಲ್ಲಿ ಮುಳುಗಿದ. ಅಲ್ಲಿ ಒಂದುಕಲ್ಲು ನೀರೊಳಗೆ ಮುಂದೆ ಚಾಚಿದೆ. ಅದರ ಅಡಿಯಲ್ಲಿ ಹೋಗಿ ಬಾಯಿಂದ ಗಾಳಿಯೂದಿ ನೀರಗುಳ್ಳೆ ಎಬ್ಬಿಸಿದರೆ... ಕಲ್ಲಿನಲ್ಲಿರುವ ಪುಟ್ಟ ರಂಧ್ರದ ಮೂಲಕ ಸಣ್ಣ ಸಣ್ಣ ಗುಳ್ಳೆಗಳು ಬಹಳ ಹೊತ್ತು ಮೇಲೆ ಕಾಣಿಸುತ್ತವೆ. ನಾಗ ಹಾಗೇ ಮಾಡಿ ಹೊರಗೆ ಬಂದ. ಇದನ್ನು ನೋಡಿದ ರೋಹಿತನಿಗೆ ಮಜವಾಗಿ ಕಂಡಿತು. ತಾನು ಮಾಡಬೇಕೆಂಬ ಆಸೆ ಆಯಿತು. ನಾಗ ಅವನಿಗೆ ಹೇಗೆ ಮಾಡಬೇಕೆಂಬ ವಿವರವನ್ನು ತಿಳಿಸಿದ.



ರೋಹಿತ ಈಗ ನೀರಿಗೆ ಜಿಗಿದು ಕಲ್ಲಿನ ಅಡಿಗೆ ಹೋದ. ಗಾಳಿ ಊದಿ ನೀರಗುಳ್ಳೆ ಎಬ್ಬಿಸಿದ. ಈಗ ಹೊರಬರಲು ಪ್ರಯತ್ನಿಸಿದರೆ ಹೊರಬರಲೇ ಆಗುತ್ತಿಲ್ಲ. ಅವನಿಗೆ ಉಸಿರು ಕಟ್ಟತೊಡಗಿತು...

ರೋಹಿತ ಹೊರಗೆ ಬರಲು ತಡವಾಗಿದ್ದನ್ನು ನೋಡಿದ ನಾಗ ನೀರಿಗೆ ಜಿಗಿದು ಮುಳುಗಿದ. ಕಲ್ಲಿನ ಅಡಿಯಲ್ಲಿಯೇ ಇದ್ದ ರೋಹಿತನ ಕಾಲು ಜಗ್ಗಿ ಹೊರಗೆ ತಂದ. ರೋಹಿತ ತನ್ನ ಜೀವವೇ ಹೋಗುತ್ತದೆ ಎನ್ನುವಂತೆ ಗಾಬರಿಯಾಗಿದ್ದ. ಈಗ ಅವನು ಈಜುತ್ತಾ ಮೇಲೆ ಬಂದ. ನಾಗನೂ ಬಂದ. ರೋಹಿತ ನಾಗನನ್ನು ಬಿಗಿಯಾಗಿ ಅಪ್ಪಿಕೊಂಡು ಕಣ್ಣೀರಿಳಿಸಿದ್ದು ನಾಗನಿಗೂ ಗೊತ್ತಾಗಲಿಲ್ಲ.

ಅಷ್ಟರಲ್ಲಿ ರೋಹಿತನ ಅಮ್ಮ ಊಟಕ್ಕೆ ಬಾರೋ ಎಂದು ಕರೆಯತೊಡಗಿದ್ದಳು. ಇಬ್ಬರೂ ಮನೆಯ ಕಡೆ ಹೊರಟರು. ನಾಗನನ್ನು ಊಟಕ್ಕೆ ಕರೆದರೆ ಅಮ್ಮ ಏನು ಹೇಳುತ್ತಾರೋ ಅನಿಸಿತು ರೋಹಿತನಿಗೆ. ಆದರೂ ನಮ್ಮ ಮನೆಯಲ್ಲಿ ಊಟ ಮಾಡುವಿಯಂತೆ ಬಾ ಎಂದು ನಾಗನನ್ನು ಕರೆದ. 'ಇಲ್ಲ, ಇನ್ನೊಂದು ದಿನ ಬರುತ್ತೇನೆ' ಎಂದು ಹೇಳುತ್ತಾ ನಾಗ ಟಾಟಾ ಮಾಡಿ ಗುಡ್ಡದ ಮೇಲಿರುವ ತನ್ನ ಮನೆಯ ಕಡೆಗೆ ಹೊರಟ.

ರೋಹಿತ ಮನೆಯ ಒಳಗೆ ಬಂದು ನೋಡಿದರೆ ಅಮ್ಮ ಊಟಕ್ಕೆ ಪ್ಲೇಟು ಹಾಕಿದ್ದಳು. ಪ್ಲೇಟಿನ ಪಕ್ಕದಲ್ಲೇ ಸಿಹಿ ಸಿಹಿ ಉಂಡೆ ತಯಾರಿಸಿಟ್ಟಿದ್ದಳು. ಅದನ್ನು ನೋಡಿದ ರೋಹಿತ್ ಐದಾರು ಸಿಹಿ ಉಂಡೆ ಎತ್ತಿಕೊಂಡು ದೊಡ್ಡದಾಗಿ 'ನಾಗ, ನಾಗ' ಎಂದು ಕರೆಯುತ್ತಾ ಗುಡ್ಡ ಹತ್ತಿ ಓಡಿದ. ರೋಹಿತನ ಅಮ್ಮ ಒಂದು ರೀತಿ ದಿಗಿಲಿನಿಂದ ಇದನ್ನು ನೋಡುತ್ತಾ ಸುಮ್ಮನೆ ನಿಂತಿದ್ದಳು...

●